# ಪುಸ್ತಕ ಪರಾಗ

## ಸಂಪಿಗೆಯ ಪರಿಮಳ



**ನಲವತ್ತೈದನೇ** ವಯಸ್ಸಿಗೆ ಕನ್ನಡ ಕಲಿತು, ಕಥೆಗಳ ಕಾಡಿನಲ್ಲಿ ತಮ್ಮದೇ ಆದ ಜಾಡು ಮೂಡಿಸಿರುವ ಬನ್ನೂರಿನ ಅದೀಬ್ ಅಖ್ತರ್ ಅವರ ಹೊಸ ಸಂಕಲನ, 'ಸಂಪಿಗೆಯ ಪರಿಮಳ.' ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿರುವ ರಚನೆಗಳೂ ಸೇರಿದಂತೆ, ಹದಿನೆಂಟು ಕಥೆಗಳಿರುವ ಈ ಸಂಕಲನ ಕಥೆಗಾರರ ಸಾಹಿತ್ಯ ಮತ್ತು ಜೀವನಪ್ರೀತಿಯ ಸಮೀಕರಣದಂತಿದೆ. ವರ್ತಮಾನದ ಬಿಕ್ಕಟ್ಟುಗಳನ್ನು ಅರ್ಥ ಮಾಡಿಕೊಳ್ಳುವ ಹಾಗೂ ಅವುಗಳಿಗೆ ಇರಬಹುದಾದ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನದಂತೆ ಅದೀಬ್‌ರ ಕಥೆಗಳನ್ನು ನೋಡಬಹುದು.

ಪುಸ್ತಕದ ಶೀರ್ಷಿಕೆಯ ಕಥೆ 'ಸಂಪಿಗೆಯ ಪರಿಮಳ'ವನ್ನು ಅದೀಬ್‌ರ ಆಶಯಗಳ ಪ್ರಾತಿನಿಧಿಕ ಕಥೆಯಂತೆ ಗಮನಿಸಬಹುದು. ಕೋಮುವಿಷವನ್ನು ಗರ್ಭಿಣಿ ಹೆಣ್ಣಿನ ಮೇಲೆಸಗಿದ ಅಪರಾಧಿಯೊಬ್ಬ, ತನ್ನ ಪಾಪಕೃತ್ಯಕ್ಕೆ ಪಶ್ಚಾತ್ತಾಪ ಪಡುವ ಕಥೆಯಿದು. ಪಾಪದ ನೆನಪುಗಳ ಹಾದಿಯಲ್ಲಿ ಸಂಪಿಗೆ ಮರವನ್ನು ತಲುಪುವ ಆ ವ್ಯಕ್ತಿ, ತಾನು ಜೀವ ತೆಗೆದ ಹೆಣ್ಣಿನ ಕುಟುಂಬ, ಬಂಜೆತನಕ್ಕೆ ಔಷಧಿ ಕೊಡುವುದನ್ನು ತಿಳಿದು ತಲ್ಲಣಿಸಿಹೋಗುತ್ತಾನೆ. ಸಂಪಿಗೆ ಅವನ ಪಾಲಿಗೆ ಬೋಧಿಯಾಗಿ ಕಾಣಿಸುತ್ತದೆ. ಮನುಷ್ಯನ ಕೇಡಿನ ವಿವಿಧ ಮುಖಗಳನ್ನು ಕಾಣಿಸುತ್ತಲೇ, ಅದಕ್ಕೆ ಉತ್ತರವಾಗಿ ಮಾನವೀಯ ಆಯಾಮಗಳನ್ನು ಮುನ್ನೆಲೆಗೆ ತರುವ ಕಾರಣದಿಂದಾಗಿ ಅದೀಬ್‌ರ ಕಥೆಗಳು ಆಪ್ತವೆನ್ನಿಸುತ್ತವೆ. ಸರಳ ಸೌಂದರ್ಯ ಹಾಗೂ ಪ್ರಾಮಾಣಿಕ ಅಭಿವ್ಯಕ್ತಿಯ ಕಾರಣದಿಂದಲೂ ಇಲ್ಲಿನ ಕಥೆಗಳು ಇಷ್ಟವಾಗುತ್ತವೆ.

**ಲೇ: ಅದೀಬ್ ಅಖ್ತರ್; ಪು: 144; ಬೆ: ₹ 140; ಪ್ರ: ಅಭಿರುಚಿ ಪ್ರಕಾಶನ, ಮೈಸೂರು. ಫೋನ್: 9980560013.**

---

## 60ರಲ್ಲಿ ಅಂಬೆಗಾಲು




**ಅರವತ್ತರ** ಆಸುಪಾಸಿನಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿದ ಬರಹಗಾರರ ಪರಂಪರೆಯೊಂದು ಕನ್ನಡದಲ್ಲಿದೆ. ಆ ಸಾಲಿಗೆ ಹೊಸ ಸೇರ್ಪಡೆ ಐ.ವಿ. ಶ್ರೀನಿವಾಸ್. ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅವರ ಶಿಷ್ಯರ ಗುಂಪಿನ ಇವರು, ಗುರುವಿನಿಂದ ಪ್ರೇರಿತರಾಗಿ ಕವಿತೆ ಕಟ್ಟಲು ಪ್ರಯತ್ನಿಸಿದ್ದಾರೆ; ತಮ್ಮ ಪ್ರಯತ್ನವನ್ನು '60ರಲ್ಲಿ ಅಂಬೆಗಾಲು' ಎಂದು ಕರೆದುಕೊಂಡಿದ್ದಾರೆ.

ಮಕ್ಕಳ ಅಂಬೆಗಾಲು ನಡಿಗೆ ಆಕರ್ಷಕವಾದುದು. ಇಲ್ಲಿನ ರಚನೆಗಳೂ ತಮ್ಮ ಮುಗ್ಧ ಸೌಂದರ್ಯದಿಂದ ಮನಸೆಳೆಯುತ್ತವೆ. ಪುಟ್ಟ ರಚನೆಗಳಲ್ಲಿ ಕಾವ್ಯವನ್ನು ಅರಳಿಸುವ ಪ್ರಯತ್ನ ಗಮನಾರ್ಹ. ಒಂದೆರಡು ಉದಾಹರಣೆ: 'ಹೆಮ್ಮರದ ಅಲೆಯಲುಗು/ ಅದರ ಮೆಲ್ಲನುಲಿಯಂತೆ', 'ರಕ್ತ ಅಲ್ಲಲ್ಲಿ ಚೆಲ್ಲಿ/ ಹೆಪ್ಪುಗಟ್ಟಿದ್ದು ನೋಡಿದರೆ/ ಮನಸ್ಸಿಗೆ ಬೇಸರ/ ಅದೇ ಹಸಿರು ಹಾಗಾದರೆ/ ಒಂದು ಮರ!' – ಇಂಥ ಪುಟ್ಟ ಸಾಲುಗಳ ಜೊತೆಗೆ ಬಹು ಸೊಗಸಾದ ಛಾಯಾಚಿತ್ರಗಳೂ ಇವೆ. ಅಕ್ಷರ ಮತ್ತು ಬಣ್ಣದ ಛಾಯಾಚಿತ್ರಗಳ ಜುಗಲಬಂದಿ ಹೊಳಪು ಕಾಗದದಲ್ಲಿ ರೂಪುಗೊಂಡಿರುವುದು ಪುಸ್ತಕದ ಸೊಗಸನ್ನು ಹೆಚ್ಚಿಸಿದೆ.

**ಲೇ: ಐ.ವಿ. ಶ್ರೀನಿವಾಸ್; ಪು: 112, ಬೆ: ₹ 400; ಪ್ರ: ಎಚ್.ಎಸ್.ವಿ. ವಿದ್ಯಾರ್ಥಿ ಬಳಗ, ಬೆಂಗಳೂರು. ಫೋನ್: 8762738075.**